**ದಿಃ06.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲುಃ ವಾದಿ ಪರ ವಕೀಲರಿಂದಃ**

ಈ ದಾವೆಯಲ್ಲಿ ನನಗೆ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ಯಾವುದೇ ಸಮನ್ಸ ಬಂದಿರುವುದಿಲ್ಲ. DW.01 ರವರು ನನ್ನನ್ನು ಸಾಕ್ಷ್ಯ ನುಡಿಯಲು ಕರೆದುಕೊಂಡು ಬಂದಿರುತ್ತಾರೆಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ

ಪತ್ರದಲ್ಲಿ ಬರೆದ ಅಂಶಗಳ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳ ಸರ್ವೇ ನಂ.205 ಮತ್ತು 207 ಆಗಿರುತ್ತವೆ. ಸರ್ವೇ ನಂ. 207 ಖರೀದಿ ಮಾಡಿದ ಜಮೀನು ಆಗಿರುತ್ತದೆ. ವಾದಿ ಪ್ರತಿವಾದಿಯ ಮನೆಗಳಿಗೂ ನನ್ನ ಮನೆಗೂ 4 – 5 ಕಿ.ಮೀ ಅಂತರ ಇರುತ್ತದೆ. ನಮ್ಮ ನಮ್ಮ ಮನೆಗಳಲ್ಲಿ ನಡೆಯುವ ವಿಚಾರಗಳು ನಮಗೆ ಪರಸ್ಪರ ಗೊತ್ತಾಗುವುದಿಲ್ಲ ಎಂದರೆ ಸರಿಯಲ್ಲ. ಮನೆ ವ ಖುಲ್ಲಾ ಜಾಗೆ ನಂ.1351 ರ ಆಸ್ತಿ ಉತಾರದಲ್ಲಿ ನನ್ನ ಮತ್ತು DW.01 ರವರ ಹೆಸರು ಜಂಟಿ ಆಗಿರುತ್ತದೆ ಎಂದರೆ ಸರಿ. ನಾನು ಮತ್ತು DW.01 ರವರು ಸಂಬಂಧಿಕರಲ್ಲ. ಸದರಿ ಆಸ್ತಿಯನ್ನು ನಾನು ಖರೀದಿ ಮಾಡಿ DW.01 ರವರಿಗೆ ನೀಡಿರುತ್ತೇನೆ. ಸದರಿ ಆಸ್ತಿಯನ್ನು ನಾನು DW.01 ರವರಿಗೆ ಕೊಟ್ಟಾಗ ಮೃತ ವಾದಿ ಮತ್ತು ಪ್ರತಿವಾದಿ ಜೋತೆ ಆಗಿದ್ದರು ಎಂದರೆ ಸರಿಯಲ್ಲ. ಮೇಲೇ ಹೇಳಿದ ಆಸ್ತಿಯನ್ನು ನಾನು DW.01 ರವರಿಗೆ ನೀಡಿದ್ದು, ನಾವು ಅಜುಬಾಜು ವಾಸ ವಿರುವುದರಿಂದ DW.01 ರವರು ಮಾತ್ತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮೃತ ವಾದಿ ಮತ್ತು ಪ್ರತಿವಾದಿಯರ ನಡುವೆ ಉಪನೋಂದಣಿ ಕಚೇರಿಯಲ್ಲಿ ಅಥವಾ ಊರಿನಸಮಕ್ಷಮದಲ್ಲಿ ಯಾವುದೇ ವಾಟ್ನಿ ಪತ್ರ ಆಗಿರುವುದಿಲ್ಲ ಎಂದರೆ ಸರಿ. ಇವತ್ತಿಗೂ ದಾವಾ ಆಸ್ತಿಗಳ ಊತಾರದಲ್ಲಿ ಮೃತ ವಾದಿ ಮತ್ತು ಪ್ರತಿವಾದಿಗಳ ಹೆಸರು ಜಂಟಿ ಆಗಿರುತ್ತವೆ ಎಂದರೆ ಸರಿ.

ಪ್ರತಿವಾದಿಯ ಮಕ್ಕಳು ಸರಕು ಸಾಗಣೆ ವಾಹನದ ವ್ಯವಹಾರದಿಂದ ಉಳಿಕೆ ಮಾಡಿದ ಹಣ ಮತ್ತು ಬ್ಯಾಂಕ ಸಾಲದಿಂದ ಮೀನಿ ಲಾರಿ, ಸ್ವರಾಜ್ ಮಜ್ದಾ ಮುಂತಾದ ಸಾರಿಗೆವಾಹವನ್ನು ಖರೀದಿಸಿ ಅದರಲ್ಲಿ ತಾವೇ ದುಡಿದು ಬ್ಯಾಂಕ ಸಾಲ ತೀರಿಸಿ ತಮಗೆ ಬಂದ ಜಮೀನನ್ನು ಉಳಿಮೆ ಮಾಡಿ ಬಂದ ಆದಾಯ ದಿಂದ ಉಳಿತಾ ಮಾಡಿ ಐಟಂ 02 ರ ಆಸ್ತಿಯನ್ನು ಖರೀದಿಸಿರುತ್ತಾರೆಂದು ಎಂದು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಡಿ.02 ರಂತೆ ಗುರುಸಿದ್ದಪ್ಪ ಬೆಳವಂಕಿರವರ ಆಸ್ತಿಯನ್ನು ಪ್ರತಿವಾದಿ ಖರೀದಿಸಿರುತ್ತಾರೆ. ಸದರಿ ಖರೀದಿಯ ವ್ಯವಹಾರ ಮೂಲ ಪುರುಷ ಮಲ್ಲೇಶಪ್ಪ ರವರು ಬದುಕಿದ್ದ ಕಾಲಕ್ಕೆ ಆಗಿರುತ್ತದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಲಯದಲ್ಲಿ ಬೆರಳಚ್ಚುಗಾರರು ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.**